# ಕುಮಾರನ ಗೆಲುವು; 'ಕಿರಿಕ್' ನೋವು

ಕಾಲೇಜ್ ಕುಮಾರ್ ಮೊದಲಿಗೆ ಜೋರು ಸುದ್ದಿ ಮಾಡಿದ್ದು ನಾಯಕಿ ಸಂಯುಕ್ತಾ ಹೆಗಡೆ 'ಕಿರಿಕ್'ನಿಂದ. ಪರಭಾಷಾ ಚಿತ್ರದಲ್ಲಿ ಅವಕಾಶ ಸಿಕ್ಕ ಕಾರಣಕ್ಕೆ ಈಗಾಗಲೇ ಒಪ್ಪಿಕೊಂಡಿದ್ದ 'ಕಾಲೇಜ್ ಕುಮಾರ'ನಿಗೆ ಕೈಕೊಡಲು ಮುಂದಾಗಿದ್ದ ಅವರ ವರ್ತನೆಯ ವಿರುದ್ಧ ವ್ಯಾಪಕ ಟೀಕೆಯೂ ವ್ಯಕ್ತವಾಗಿತ್ತು. ನಂತರ 'ನಾನು ಹಾಗಲ್ಲ' ಎಂದು ಕಣ್ಣೀರು ಸುರಿಸಿದ್ದ ಸಂಯುಕ್ತಾ ಮತ್ತೆ ಕಮಕ್ ಕಿಮಕ್ ಅನ್ನದೇ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು.

ಅಂತೂ ಎಲ್ಲ ಕಿರಿಕಿರಿಗಳು ಕಳೆದ ಕಾಲೇಜ್ ಕುಮಾರ ತೆರೆ ಕಂಡಿದ್ದಲ್ಲದೆ ವೀಕ್ಷಕರಿಂದ ಸಮಾಧಾನಕರ ಪ್ರತಿಕ್ರಿಯೆಯೂ ಸಿಕ್ಕಾಗಿದೆ. ಇದೇ ಖುಷಿಯನ್ನು ಹಂಚಿಕೊಳ್ಳಲು ಚಿತ್ರತಂಡ ಇತ್ತೀಚೆಗೆ ಸಂತೋಷಕೂಟ ಏರ್ಪಡಿಸಿತ್ತು. ಕೂಟದಲ್ಲಿ ಸಂತೋಷ ತುಳುಕುತ್ತಿದ್ದರೂ ನಿರ್ಮಾಪಕ ಎಲ್. ಪದ್ಮನಾಭ ಅವರ ಮುಖದಲ್ಲಿ ಮಾತ್ರ ವಿಷಾದದ ಸಣ್ಣ ಎಳೆಯೊಂದು ಮನೆಮಾಡಿತ್ತು. ಅದಕ್ಕೆ ಕಾರಣವೂ ಮತ್ತದೇ ಕಿರಿಕ್ ಹುಡುಗಿ ಸಂಯುಕ್ತಾ ಹೆಗಡೆ.

ಸಿನಿಮಾವನ್ನು ಜನರು ನೋಡಿ ಮೆಚ್ಚಿದ್ದಾರೆ. ಒಂದು ಸಿನಿಮಾದಲ್ಲಿ ಅಭಿನಯಿಸಿದ ಮೇಲೆ ಸಿನಿಮಾದ ಪ್ರಚಾರ ಕಾರ್ಯದಲ್ಲಿಯೂ ಕಲಾವಿದರು ಭಾಗವಹಿಸಬೇಕು. ಆದರೆ 'ಕಾಲೇಜ್ ಕುಮಾರ ಬಿಡುಗಡೆ ಆದ ಮೇಲೆ ಸಂಯುಕ್ತಾ ಹೆಗಡೆ ತಮಗೂ ಈ ಚಿತ್ರಕ್ಕೂ ಸಂಬಂಧವೇ ಇಲ್ಲ ಎನ್ನುವ ಹಾಗೆ ಇದ್ದಾರೆ ಎನ್ನುವುದೇ ಅವರ ಬೇಸರಕ್ಕೆ ಕಾರಣ.

ಸಂಯುಕ್ತಾ ಅವರನ್ನು ತಮ್ಮ ಚಿತ್ರದ ನಾಯಕಿಯನ್ನಾಗಿ ಮಾಡಿದ್ದೇ ತಪ್ಪು ಎಂದೂ ಅವರಿಗೆ ಅನಿಸಿದೆ. ಚಿತ್ರೀಕರಣದ 90 ದಿನಗಳ ಕಾಲ ಸಂಯುಕ್ತಾ ನಮ್ಮ ಕುಟುಂಬದ ಸದಸ್ಯರ ಹಾಗೆ ಇದ್ದರು. ಅವರು ಕೇಳಿದ ಎಲ್ಲ ಸೌಲಭ್ಯವನ್ನೂ ಒದಗಿಸಿದ್ದೇವೆ. ಆದರೆ ಈಗ ಇದ್ದಕ್ಕಿದ್ದಂತೆ ತಂಡದೊಂದಿಗೆ ಸಂಪರ್ಕ ಕಡಿದುಕೊಂಡು ಬಿಡುವುದು ಸರಿಯಲ್ಲ ಎಂಬ ಅಳಲು ನಿರ್ಮಾಪಕರದ್ದು.

'ಕಾಲೇಜ್ ಕುಮಾರ'ನನ್ನು ನಿರ್ದೇಶಿಸಿದ್ದು ಅಲೆಮಾರಿ ಸಂತು. 'ಕೆಂಡಸಂಪಿಗೆ' ಖ್ಯಾತಿಯ ವಿಕ್ಕಿಯ ಜತೆ ಸಂಯುಕ್ತಾ ತೆರೆ ಹಂಚಿಕೊಂಡಿದ್ದಾರೆ. ಶ್ರುತಿ ಮತ್ತು ರವಿಶಂಕರ್ ಕೂಡ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ.





# ಹೊಸ ಸಿನಿಮಾದ ಗುಂಗಲ್ಲಿ ಸತ್ಯಪ್ರಕಾಶ್

'ರಾಮಾ ರಾಮಾ ರೇ..' ಸಿನಿಮಾದ ಮೂಲಕ ಭರವಸೆ ಮೂಡಿಸಿರುವ ನಿರ್ದೇಶಕ ಡಿ. ಸತ್ಯಪ್ರಕಾಶ್ ಮತ್ತೊಂದು ಚಿತ್ರ ನಿರ್ದೇಶನಕ್ಕೆ ಮುಂದಾಗಿದ್ದಾರೆ. ಈ ಬಾರಿ ಸತ್ಯಪ್ರಕಾಶ್ ಅವರ ಕ್ರಿಯಾಶೀಲತೆಗೆ ಉಮಾಪತಿ ಶ್ರೀನಿವಾಸ್ 'ಅರ್ಥ'ಪೂರ್ಣ ಬೆಂಬಲ ನೀಡುತ್ತಿದ್ದಾರೆ. ಅವರು ತಮ್ಮ ಡಿ.ಎನ್. ಸಿನಿಮಾಸ್ ಚಿತ್ರನಿರ್ಮಾಣ ಸಂಸ್ಥೆಯ ಮೂಲಕ ಸತ್ಯಪ್ರಕಾಶ್ ನಿರ್ದೇಶನದ ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರೆ.

ಕಥಾಪ್ರಧಾನ ಗುಣದಿಂದಲೇ ಗೆದ್ದಿರುವ ಸತ್ಯಪ್ರಕಾಶ್ ಅವರ ಹೊಸ ಸಿನಿಮಾ ಕೂಡ ಗಟ್ಟಿಯಾದ ಕಥೆಯ ಎಳೆಯನ್ನೇ ಆಧರಿಸಿದೆಯಂತೆ. ಈ ಚಿತ್ರ ಎಂಟು ವರ್ಷದ ಬಾಲಕನೊಬ್ಬನ ಸುತ್ತ ಕಟ್ಟಿಕೊಳ್ಳಲಿದೆ ಎನ್ನುವುದು ವಿಶೇಷ. ಬಾಲಕನ ಪಾತ್ರಕ್ಕಾಗಿ ಅವರು ಇತ್ತೀಚೆಗೆ ಬೆಂಗಳೂರಿನ ನಾಗತಿಹಳ್ಳಿ ಚಂದ್ರಶೇಖರ್ ಅವರ 'ಟೆಂಟ್ ಸಿನಿಮಾ'ದಲ್ಲಿ ಆಡಿಷನ್ ಕೂಡ ನಡೆಸಿದ್ದಾರೆ.

ಚಿತ್ರದ ಕಥೆ ಏನು? ಯಾವ ಪ್ರಕಾರದ ಚಿತ್ರ ಎನ್ನುವುದೆಲ್ಲ ಇನ್ನೂ ಗುಟ್ಟಾಗಿಯೇ ಇದೆ. ಆದರೆ ಜನರು ನಗುನಗುತ್ತ ನೋಡಬಲ್ಲ, ನೋಡಿದ ನಂತರ ತೆರೆಯ ಮೇಲೆ ಸೂಚ್ಯವಾಗಿ ಹೇಳಿದ ಹಲವು ಸಂಗತಿಗಳೂ ಮನದಲ್ಲಿ ರಿಂಗಣಿಸಬಲ್ಲ ಚಿತ್ರ ಆಗುತ್ತದೆ ಎಂದು ಮಾತ್ರ ಸತ್ಯಪ್ರಕಾಶ್ ವಿಶ್ವಾಸದಿಂದ ಹೇಳುತ್ತಾರೆ. ಚಿತ್ರಕಥೆಯ ಕೆಲಸವನ್ನು ಮುಗಿಸಿರುವ ಅವರೀಗ ಪಾತ್ರಗಳ ಆಯ್ಕೆಯ ಪ್ರಕ್ರಿಯೆಯಲ್ಲಿದ್ದಾರೆ.

■ ಪದ್ದು